ಮಾತಾಡಿ ಹೋಗುತಿದ್ದ ದಿನಗಳು. ನಂಬ್ರ ನಿಮಿತ್ತ ಬರುವ ಜನರಲ್ಲಿ ಅನೇಕರು ರಾತ್ರಿಗಟ್ಟಿ ಬರುವುದೋ ಅಥವಾ ಬಂದವರು ಅವತ್ತು ಮರಳಲಾಗದೆ ಉಳಿದುಕೊಳ್ಳುವುದೋ ಇತ್ತು. ಚಾವಡಿಯಲ್ಲಿ ದಿಂಬು, ಚಾಪೆ ಅಥವಾ ಜಮಖಾನ ಕೊಟ್ಟುಬಿಟ್ಟರೆ ಸೈ. ಹಾಗೆ ಉದ್ದಾನುದ್ದಕೆ ಜಮಖಾನ ಹಾಸಿಕೊಂಡು ರಾತ್ರಿ ಉಳಿದು ಬೆಳಗೆದ್ದು ನಡೆದ ಕಕ್ಷಿಗಾರರೆಷ್ಟೋ. ಮಲೆನಾಡಿನ ವ್ಯಾಪಾರ ಕೇಂದ್ರವಾದ ಶಿವಮೊಗ್ಗೆಯಲ್ಲೂ ಹೀಗೆಯೇ ಇತ್ತಂತೆ, ಕೋರ್ಟುಕೆಲಸಕ್ಕೆ ಬರುವವರು, ವರ್ಷಕ್ಕೆ ಸಾಕಾಗುವಷ್ಟು ಸಾಮಾನು ಕೊಳ್ಳಲು ಬರುವವರು, ಅಡಿಕೆಮಂಡಿಗೆ ಅಡಿಕೆ ಹಾಕಲು ಬರುವವರು, ಸಂಭಾವನೆಗೆ ಬರುವ ಕ್ಷೇತ್ರ ಅರ್ಚಕರು ಮುಂತಾದವರು ತಮ್ಮತಮ್ಮ ವಕೀಲರ, ಸಾಹುಕಾರರ, ಶಿಷ್ಯ ಬಳಗದ ಮನೆಗಳಲ್ಲಿ ಉಳಿದುಕೊಳ್ಳುತ್ತಿದ್ದ ಸಂಪ್ರದಾಯ, ನನ್ನ ಅತ್ತೆ ಹೇಳುತ್ತಿದ್ದರು. ಅತ್ತೆಯ ಮಾತಿನಲ್ಲಿ ಹಾಗೆ ಉಳಿದುಕೊಳ್ಳುವವರು ಒಗಟು, ವಿನೋದ ಹಾಗೂ ವಿಚಿತ್ರ ಗಣಿತ ಇತ್ಯಾದಿಗಳನ್ನು ಬಿಡಿಸಿಕೊಂಡು ಮಕ್ಕಳನ್ನು ರಂಜಿಸುತ್ತಿದ್ದ ಪ್ರಸಂಗವೆಲ್ಲ ಬರುತ್ತಿತ್ತು. ಹೆಚ್ಚಿನಪಕ್ಷ ಅಂದು ಇಡೀ ದೇಶದಲ್ಲೇ ಹೀಗಿದ್ದಿರಬಹುದು.

ದೊಡ್ಡ ಕುಟುಂಬದಲ್ಲಿ ಹತ್ತಿರದಲ್ಲೇ ಸಿಗುವ ಅನೇಕ ಬಗೆಯ ಬದುಕುಗಳ, ಮನೆಯಲ್ಲೇ ಒದಗುತ್ತಿದ್ದ ಹಲವು ಬಗೆಯ ಜನರ ಮಾತುಕತೆ ಸುಖ ದುಃಖಗಳ, ಕೆಲಸದವರ, ಮನೆಯ ಹಿಂಭಾಗದಲ್ಲಿನ ಹಟ್ಟಿಯ (ಕೊಟ್ಟಿಗೆ) ದನ, ಎಮ್ಮೆ, ಕರುಗಳ ಒಡನಾಟ, ಮನೆ ಸುತ್ತಾ ಹಿತ್ತಲು –ಇತ್ಯಾದಿಗಳ ನಡುವೆ ನಾನು ಬೆಳೆದೆ. ಹಿಂಬದಿಯ ಜಗಲಿಯೋ ಊರುಮೇಲಿನ ಮಾತು, ನೂರಾರು ಕತೆ, ಹಾಡು ಹಸೆ, ಯಾರ್‍ಯಾರ ಟೀಕೆ ಟಿಪ್ಪಣಿ ಎಲ್ಲವೂ ಸತತ ಜರುಗುವ ಒಂದು ರಂಗಮಂಚವೇ ಆಗಿತ್ತೇನೊ. ತರಕಾರಿಯವರು, ಹೂ ಮಾರುವವರು, ಎಣ್ಣೆ ಮ್ಯಾಣತಿ, ಒಣಹುಲ್ಲಿನ ಗಾಡಿ, ಕಟ್ಟಿಗೆ ಗಾಡಿ, ಶನಿವಾರದಂದು ಭಿಕ್ಷುಕರು, ಸಂತೆಯ ಬೆಳಗಿನ ಜಾವ ಸಾಲುಸಾಲಾಗಿ ರಸ್ತೆಯ ಮೇಲೆ ಸಾಗುವ ಗಾಡಿಗಳ ಸದ್ದು, ಎತ್ತಿನ ಕುತ್ತಿಗೆಯ ಗಂಟೆಗಳ ನಿನಾದ, ಮುಂಜಾವಿನ ಚುಮುಚುಮುವಿನಲ್ಲಿ ಮೆಲ್ಲನೆ ಅಲುಗಾಡುತ್ತ ಕನಸಿನಂತೆ ಸಾಗುತಿದ್ದ ಗಾಡಿನೊಗದಡಿ ಕಟ್ಟಿದ ಲಾಟೀನು ಬೆಳಕು, ಮನೆ ಮುಂದಿನ ಧೂಪದ ಮರ ದೇವದಾರು ಮರ... ಎಷ್ಟು ಎಷ್ಟು ಎಷ್ಟು ಅಂತೆಲ್ಲ ಹೇಳಲಿ!

ಮನೆಯಲ್ಲಿ ವರ್ಷಾವಧಿ ನಡೆಯುವ ಶ್ರಾದ್ಧಗಳು, ಮಹಾಲಯ, ಶ್ರಾವಣಮಾಸ ಸಮಾರಾಧನೆ, ಗಣಹೋಮ, ಅಷ್ಟೇ ಅಲ್ಲ ಹುಡುಗಿ ನೋಡುವುದು, ನಿಶ್ಚಿತಾರ್ಥ ಮದುವೆಗಳು, ಉಪನಯನ ಎಷ್ಟು! ಪ್ರತಿಯೊಂದು ಸಮಾರಂಭ ಮುಗಿದ ಮೇಲೆಯೂ ಒಳಮನೆಯಲ್ಲಿ ಗೆಲುಸಂಭ್ರಮ, ಮಾತುಕತೆ ಕುಶಾಲು, ಸಕಾರಣವೋ ನಿಷ್ಕಾರಣವೋ ವೈಮನಸ್ಸು, ಮುನಿಸು, ಸಸೆತಗಳು. ಅಂತೂ ಮನೆಯೆಲ್ಲ ಅಲ್ಲೋಲಕಲ್ಲೋಲ. ಇತ್ತ ಇದಾವುದರ ಗೊಡವೆಯೇ ಇಲ್ಲದೆ ಬಾಲಸ್ತಾವತ್ ಕ್ರೀಡಾಮಗ್ನಃ, ಕಾಳಪ್ಪಾಡಿ ಮಾವಿನಮರದ ಮೇಲೆ, ಬಿಂಬಲಮರದ ಬುಡದಲ್ಲಿ, ಹುಲ್ಲುಕೋಣೆಯಲ್ಲಿ, ಎಲ್ಲಿ ಹಿರಿಯರು ತಲೆಹಾಕಲಾರರೋ ಅಲ್ಲಿ. 'ಬೋನ್ಯಾಲೆ'ಯಲ್ಲಿ (ಮನೆಯ ಊಟದ ಹಾಲು) ಮಕ್ಕಳ ಪಂಕ್ತಿಯೊಂದು ಮುಗಿದ ಮೇಲೆ ನಮ್ಮನ್ನು ಕೇಳುವವರು ಯಾರು? ಓದಿದೆಯಾ ಬರೆದೆಯಾ ಪ್ರಶ್ನೆಗಳೇ? ಹಾಗೆಂದರೇನು? ಇಂತಹ ಕುಟುಂಬದಲ್ಲಿ, ಹಲವು ಮಕ್ಕಳ ಜನನ ಬೆಳವಣಿಗೆಯ ನಡುವೆ ಬೆಳೆಯುವ ಎಲ್ಲರ ಮನಃಸ್ಥಿತಿಯೂ ಪ್ರಪಂಚ ಕಂಡಂತೆಯೇ ಇರುತ್ತದೆ ಅಲ್ಲವೆ?

ನನ್ನ ತಂದೆ ವಕೀಲರಾಗಿದ್ದರು. ಸಾವಧಾನಚಿತ್ತರು, ನಿಧಾನ ಪ್ರವೃತ್ತಿಯವರು.